ದರ್ಶನ ಮಾಡಿ ಬಂದರೆ ಸಾಕು. ಕಾಶಿ ದರ್ಶನಕ್ಕೆ ಅದು ಸಮನಾದುದು, ಅದಕ್ಕೂ ಮೀರಿದುದು ಎಂಬ ಭಾವನೆ ಇದ್ದ ಜನಪದರ ಕಾಲ ಅದು. ಅಂತಹ ಕಾಲದಲ್ಲಿ ಶಿವ ಮತ್ತು ರಾಮರು ಪಯಣಕ್ಕೆ ಬೇಕಾಗುವಷ್ಟು ರೊಟ್ಟಿ, ಚಟ್ನಿ, ಈರುಳ್ಳಿ, ಮೆಣಸಿನ ಕಾಯಿ ಬುತ್ತಿ ಕಟ್ಟಿಕೊಂಡು ಕಾಶಿಯಾತ್ರೆಗೆ ಹೊರಟರು.

ಶಿವ ದಾರಿಯಲ್ಲಿ ಊರಿನ ಕಡೆಯ ಗೃಹಕೃತ್ಯ ಸಂಬಂಧದ ಕೆಲಸಗಳನ್ನೆಲ್ಲಾ ಮರೆತು ನಿಶ್ಚಿಂತೆಯಿಂದ ನಡೆಯುತ್ತಿದ್ದನು. ಆದರೆ ರಾಮ ಮಾತ್ರ ಅರ್ಧಕ್ಕೇ ನಿಂತಿರುವ ತಮ್ಮ ಹೊಸಮನೆಯ ಕಟ್ಟಡದ ಕೆಲಸವನ್ನು ತನ್ನ ಮಗ ಹೇಗೆ ಮಾಡಿಸುತ್ತಾನೋ, ಇಲ್ಲವೋ; ದೇಶಾಂತರ ಹೊರಟು ಹೋದ ಕಿರಿಮಗ ಕಾಶಿಯಲ್ಲಾದರೂ ಸಿಕ್ತಾನ? ಎಂದೆಲ್ಲಾ ಚಿಂತೆ ಮಾಡುತ್ತಾ ನಡೆಯುತ್ತಿದ್ದನು. ಇಬ್ಬರೂ ಹೊತ್ತಾರೆ ಮಬ್ಬಿಗೇ ಮನೆ ಬಿಟ್ಟಿದ್ದರು. ಮಧ್ಯಾಹ್ನದ ಹೊತ್ತಿಗೆ ಹತ್ತನ್ನೆರಡು ಮೈಲಿ ದೂರ ನಡೆದು ಬಂದಿದ್ದರು. ಇಬ್ಬರೂ ನಡೆಯುತ್ತಿದ್ದಾಗ ಶಿವನಿಗೆ ಬಾಯಾರಿಕೆ ಶುರುವಾಯಿತು. ಅತ್ತ ಇತ್ತ ಕಣ್ಣಾಯಿಸಿದ. ಹತ್ತಿರದಲ್ಲಿ ಎಲ್ಲೂ ಕೆರೆ ಬಾವಿ ನದಿ ಕಾಣಿಸಲಿಲ್ಲ. ಸ್ವಲ್ಪ ದೂರದಲ್ಲಿ ಒಂದು ಒಂಟಿ ಗುಡಿಸಲು ಮನೆ ಅವನಿಗೆ ಕಾಣಿಸಿತು. ಆಗ ರಾಮನಿಗೆ ಶಿವ, 'ಅಲ್ಲಿ ಕಾಣುವ ಗುಡಿಸಲಿಗೆ ಹೋಗಿ ನೀರು ಕುಡಿದು ಬರುತ್ತೇನೆ. ನನ್ನಿಂದ ಬಾಯಾರಿಕೆ ತಡೆಯಲು ಆಗುತ್ತಿಲ್ಲ' ಎಂದು ಹೇಳುತ್ತಾ, ಆ ಗುಡಿಸಲಿನ ಕಡೆಗೆ ಹೋಗುತ್ತಿದ್ದ ಕಾಲುದಾರಿಯ ಕಡೆಗೆ ತಿರುಗಿದ. ರಾಮ, 'ನೀನು ಹೋಗಿ ಬೇಗ ನೀರು ಕುಡಿದು ಬಾ. ನಾನು ಮುಂದೆ ಮುಂದಕ್ಕೆ ಹೋಗುತ್ತಿರುತ್ತೇನೆ' ಎನ್ನುತ್ತಾ ಅವನು ಕಾಶಿಯಾತ್ರೆಯ ದಾರಿಯಲ್ಲಿ ಮುಂದೆ ಮುಂದಕ್ಕೆ ನಡೆದನು.

2

ಶಿವ ಆ ಗುಡಿಸಲಿನ ಬಳಿಗೆ ಬಂದನು. ಅದರ ಮೇಲಿನ ಹೊದಿಕೆಯಲ್ಲಿ ಒಂದು ಭಾಗ ಕೆಳಗೆ ಬಿದ್ದು ಗೆದ್ದಲು ಹಿಡಿದು ಕುಳಿತಿತ್ತು. ಮಣ್ಣಿನ ಗೋಡೆ ಒಂದು ಭಾಗದಲ್ಲಿ ಶಿಥಿಲವಾಗಿತ್ತು. ಶಿವನಿಗೆ ಅದನ್ನು ಕಂಡು ಒಳಗೆ ಮನುಷ್ಯರು ಇದ್ದಾರೋ ಇಲ್ಲವೋ ಎಂಬ ಅನುಮಾನ ಬಂತು. ಅದರ ಅರ್ಧ ಮುರಿದ ಬಾಗಿಲನ್ನು ತಳ್ಳಿಕೊಂಡು ಒಳಗೆ ಹೋದನು. ಒಂದು ಮೂಲೆಯಲ್ಲಿ ಕತ್ತಲಿನಲ್ಲಿ ಮಲಗಿದ್ದ ಒಬ್ಬಳು ವೃದ್ಧೆ ಕಂಡಳು. ಇನ್ನೊಂದು ಮೂಲೆಯಲ್ಲಿ ಒಬ್ಬ ವೃದ್ಧ ಮಲಗಿದ್ದ. ಶಿವನಿಗೆ ಅವನಿಂದ ನರಳುವ ಶಬ್ದ ಕೇಳಿಸಿತು. ಅವನು ಆ ಧ್ವನಿಯ ಹತ್ತಿರ ಬಂದು ನೋಡಿ ಕೂಗಿದ. ಅವನ ಕೂಗಿಗೆ ವೃದ್ಧೆ ಎಚ್ಚರಗೊಂಡು ತನ್ನ ಮಗನೇ ಬಂದನೇನೋ ಎಂದು ತಿಳಿದು, 'ಬಾ, ಮಗನೆ, ಎಲ್ಲಿ ನನ್ನ ಸೊಸೆ!' ಎಂದು ಆತುರದಿಂದ ಗಲಿಬಿಲಿಗೊಂಡಳು. ಆಗ 'ನಾನು! ನನ್ನ ಹೆಸರು ಶಿವ ಅಂಥ. ದಾರಿಯಲ್ಲಿ ಹೋಗುತ್ತಿದ್ದೆ. ಬಾಯಾರಿ ನೀರು ಕುಡಿದು ಹೋಗುವ ಅಂಥ ಬಂದೆ' ಅಂದನು. ಅಷ್ಟರಲ್ಲಿ ಅಜ್ಜಿಗೆ ಅಂಟಿಕೊಂಡು ಮಲಗಿದ್ದ ಏಳೆಂಟು ವರ್ಷದ ಬಾಲಕನೂ ಮೆಲ್ಲಗೆ ಎಚ್ಚರಗೊಂಡ.

ಆಗ ಆ ವೃದ್ಧೆ, 'ನಿನಗೆ ನೀರು ಬೇಕಾ? ನಾವೇ ನೀರು ಕುಡಿದು, ಊಟ ಮಾಡಿ ಮೂರು ದಿನವಾಯ್ತು. ಮನೆಯಲ್ಲಿ ಒಂದು ಹನಿ ನೀರೂ ಇಲ್ಲ. ನೀನೇ ಹೋಗಿ ಒಂದು ಗುಟುಕು ನೀರು ತಂದು ನಮ್ಮ ಬಾಯಿಗೂ ಬಿಟ್ಟರೆ ನಾವೂ ನಿಶ್ಚಿಂತರಾಗಿ ಪ್ರಾಣ ಬಿಡುತ್ತೇವೆ' ಎನ್ನುತ್ತಾ ತನ್ನ ಹಸಿವು, ಸುಸ್ತು, ಕರುಳು ಸುತ್ತಿಕೊಂಡು ತನ್ನ ಬಾಯಿಗೇ ಬಂದಂತೆ ಮಾತಾಡಿದಳು.

ಮೂರ್‍ನಾಲ್ಕು ವರ್ಷದಿಂದ ಮಳೆ ಬೆಳೆ ಇಲ್ಲದೆ ಬಂದ ಬರದಿಂದ ಅವರು ತತ್ತರಿಸಿ ಹೋಗಿದ್ದಾರೆಂಬುಂದು ಶಿವನಿಗೆ ಗೊತ್ತಾಯಿತು. ಅವರ ಮಗ ಮತ್ತು ಸೊಸೆ ಇನ್ನು ಇಲ್ಲಿ ಬದುಕಲು ಸಾಧ್ಯವಿಲ್ಲ ಎಂದು ತಿಳಿದು ತಮ್ಮ ಮಗನನ್ನು ಅವನ ಅಜ್ಜ ಅಜ್ಜಿಯ ಬಳಿಯೇ ಬಿಟ್ಟು ಪಟ್ಟಣಕ್ಕೆ ಕೆಲಸ ಹುಡುಕಿಕೊಂಡು ಹೊರಟು ಹೋಗಿದ್ದಾರೆಂಬುದು ತಿಳಿಯಿತು. ಈಗ ಇವರು ಹಸಿದು ಅಸ್ವಸ್ಥರಾಗಿ ಸಾಯುವ ಸ್ಥಿತಿ ಮುಟ್ಟಿದ್ದಾರೆಂಬುದು ಶಿವನಿಗೆ ಅರ್ಥವಾಯಿತು. ಆಗ ಅವನಲ್ಲಿದ್ದ ಕರುಣೆಯ ಭಾವ ಉಕ್ಕಿ ಬಂತು.

ನಂತರ ಆ ವೃದ್ಧೆ ಹೇಳಿದಂತೆ ಶಿವ ಮನೆಯಿಂದ ಮಣ್ಣಿನ ಗಡಿಗೆ ತೆಗೆದುಕೊಂಡು ಸ್ವಲ್ಪ ದೂರ ಹೋಗಿ ಕಣಿವೆಯಲ್ಲಿಳಿದು ಪಾತಾಳ ಸೇರಿದ್ದ ನೀರಿನಲ್ಲೇ ತಾನೂ ಕುಡಿದು ಒಂದು ಗಡಿಗೆ ನೀರನ್ನು ತುಂಬಿಕೊಂಡು ಬಂದನು. ಆ ವೃದ್ಧೆ, ವೃದ್ಧ, ಬಾಲಕನನ್ನು ಏಳಿಸಿ ಕೂರಿಸಿ ನೀರು ಕುಡಿಸಿದನು. ತಾನು ಯಾತ್ರೆಗೆಂದು ಕಟ್ಟಿಕೊಂಡು ತಂದಿದ್ದ ರೊಟ್ಟಿ ಬುತ್ತಿಯನ್ನು ಬಿಚ್ಚಿದನು. ಆ ಬಾಲಕ ರೊಟ್ಟಿಯನ್ನು ನೋಡಿದ್ದೇ ತಡ ಎದ್ದು ಅವನ ಹತ್ತಿರ ಧಾವಿಸಿದನು.